## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ವಾಸುದೇವ್ ಡಿ., ಪ್ರಾಂಶುಪಾಲರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಕಾರ್ಕಳ ಇವರನ್ನು ಅಮಾನತ್ತಿನಲ್ಲಿಡುವ ಬಗ್ಗೆ.

**ಓದಲಾಗಿದೆ:**

ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಏಕಕಡತ ಸಂಖ್ಯೆ: ಡಿಟಿಇ 32 ಡಿಇಕ್ಯೂ (1) 2012, ದಿನಾಂಕ: 25-07-2013.

**ಪ್ರಸ್ತಾವನೆ:**

ನಿರ್ದೇಶಕರು ಮೇಲೆ ಓದಲಾದ ಪತ್ರದಲ್ಲಿ ಶ್ರೀ ವಾಸುದೇವ್ ಡಿ., ಪ್ರಾಂಶುಪಾಲರು ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಕಾರ್ಕಳ ಇವರು ಕರ್ತವ್ಯ ನಿರ್ಲಕ್ಷತೆ ಎಸಗಿರುವ ಬಗ್ಗೆ ಇವರ ವಿರುದ್ಧ ತಾಲ್ಲೂಕಿನ ನಾಗರೀಕರು ಹಾಗೂ ವಿದ್ಯಾರ್ಥಿ ಪೋಷಕರು ನೀಡಿರುವ ದೂರಿನ ಅನ್ವಯ ಜಂಟಿ ನಿರ್ದೇಶಕರು (ಪರೀಕ್ಷೆ) ಇವರ ನೇತೃತ್ವದಲ್ಲಿ ರಚಿಸಲಾದ ತನಿಖಾ ತಂಡವು ದಿ: 28.03.2013 ರಂದು ಸಂಸ್ಥೆಗೆ ಭೇಟಿ ನೀಡಿ ಪೂರ್ವಭಾವಿ ತನಿಖೆ ನಡೆಸಿ ನೀಡಿರುವ ವರದಿಯನ್ವಯ ವಿದ್ಯಾರ್ಥಿನಿಯರು ಮರು ಮೌಲ್ಯಮಾಪನ ಫಲಿತಾಂಶ ಪ್ರಕಟಣೆ ಆಗದಿರಲು ಕಾರಣವನ್ನು ವಿಚಾರಿಸಲಾಗಿ ವಿದ್ಯಾರ್ಥಿನಿಯರಿಂದ ನಿಗದಿತ ಶುಲ್ಕವನ್ನು ಸಂಸ್ಥೆಯಲ್ಲಿ ಪಡೆಯದೇ ಬ್ಯಾಂಕಿನ/ಖಜಾನೆಯ ಮುಖಾಂತರ ಶುಲ್ಕ ಪಾವತಿಸಲು ಪ್ರಾಂಶುಪಾಲರು ಸೂಚಿಸಿರುವುದಾಗಿ, ಅದರಂತೆ ವಿದ್ಯಾರ್ಥಿನಿಯರು ಶುಲ್ಕವನ್ನು ಪಾವತಿಸಿದ್ದು, ಶುಲ್ಕವನ್ನು ಪಾವತಿಸಿದ ನಂತರ ವಿದ್ಯಾರ್ಥಿನಿಯರೇ ನೇರವಾಗಿ ತಾಂತ್ರಿಕ ಪರೀಕ್ಷಾ ಮಂಡಳಿಗೆ ಕಳುಹಿಸಲು ಪ್ರಾಂಶುಪಾಲರು ಸೂಚಿಸಿರುತ್ತಾರೆ. ಸದರಿ ಪ್ರಾಂಶುಪಾಲರು ಆಡಳಿತಾತ್ಮಕ ದೃಷ್ಟಿಯನ್ನು ಅರಿಯದೇ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡದೇ ಸಮಸ್ಯೆ ಉದ್ಭವವಾಗಿ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡದೇ ಇರುವುದಕ್ಕೆ ಕಾರಣಕರ್ತರಾಗಿದ್ದು, ಇದರಿಂದ ವಿದ್ಯಾರ್ಥಿನಿಯರು ಮುಷ್ಕರದಲ್ಲಿ ತೊಡಗಿರುತ್ತಾರೆ.

ಸ್ಥಳೀಯ ದಲಿತ ಸಂಘರ್ಷ ಸಮಿತಿಯವರು ಪ್ರಾಂಶುಪಾಲರಾದ ಶ್ರೀ ವಾಸುದೇವ್ ಡಿ. ಇವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಕಲಿಕಾ ಸಾಮಗ್ರಿಗಳ ಖರೀದಿಗಾಗಿ ಮಂಜೂರಾಗಿರುವ ಹಣ 1.5 ಲಕ್ಷ ರೂಪಾಯಿಗಳನ್ನು ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿಗೆ ಉಪಯೋಗಿಸದೇ ಮೋಸ ಮಾಡಿರುತ್ತಾರೆಂದು ಆಪಾದಿಸಿರುತ್ತಾರೆ.

ಲೆಕ್ಕ ಶೀರ್ಷಿಕೆ 132 ರಲ್ಲಿ ರೂ.2,50,000/-ಗಳ ಅನುದಾನ ಬಿಡುಗಡೆಯಾಗಿದ್ದು, ಕೇವಲ ರೂ.79,505/- ಖರ್ಚಾಗಿದ್ದು, ಉಳಿದ ರೂ.1,70,495/- ಅನುದಾನ ಲ್ಯಾಪ್ಸ್ ಆಗಿರುತ್ತದೆ ಹಾಗೂ ಲೆಕ್ಕ ಶೀರ್ಷಿಕೆ 180 ರಲ್ಲಿ ರೂ.22,000/-ಗಳ ಅನುದಾನ ಬಂದಿದ್ದು ಮತ್ತು ಲೆಕ್ಕ ಶೀರ್ಷಿಕೆ 422 ರಲ್ಲಿ ರೂ.1,76,000/-ಗಳ ಅನುದಾನ ಬಂದಿದ್ದು ಹಾಗೂ ಲೆಕ್ಕ ಶೀರ್ಷಿಕೆ 423 ರಲ್ಲಿ ರೂ.80,000/- ಗಳ ಅನುದಾನ ಬಂದಿದ್ದು ಈ ಎಲ್ಲಾ ಅನುದಾನಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳದೇ ಆಡಳಿತಾತ್ಮಕ ದೃಷ್ಟಿಯನ್ನು ತಿಳಿದುಕೊಳ್ಳದೇ ಒಬ್ಬ ಜವಾಬ್ದಾರಿಯುತ ಪ್ರಾಂಶುಪಾಲರು ಕರ್ತವ್ಯ ನಿರ್ಲಕ್ಷತೆಯಿಂದ ಬೇಜವಾಬ್ದಾರಿತನ ತೋರಿರುವುದು ಕಂಡುಬಂದಿರುತ್ತದೆ ಎಂದು ತನಿಖಾ ತಂಡವು ವರದಿ ಮಾಡಿರುತ್ತದೆ.

ಪ್ರಾಂಶುಪಾಲರು ಎಲ್ಲಾ ಉಪನ್ಯಾಸಕ/ಸಿಬ್ಬಂದಿ ವರ್ಗದವರಿಗೆ/ಅರೆಕಾಲಿಕ ನೌಕರರಿಗೆ ವೇತನ ಬಟವಾಡೆ ಮಾಡುವಲ್ಲಿ ವಿಫಲರಾಗಿರುವುದು ಇತರ ಸಿಬ್ಬಂದಿಯವರಿಗೆ ಮಾನಸಿಕ ಕಿರುಕುಳ ನೀಡಿ ಸಂಸ್ಥೆಯಲ್ಲಿ ಸೌಹಾರ್ದ ವಾತಾವರಣ ಕಾಪಾಡಲು ವಿಫಲರಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆಯೆಂದು ತನಿಖಾ ತಂಡವು ಅಭಿಪ್ರಾಯ ಪಟ್ಟಿದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ ಶ್ರೀ ವಾಸುದೇವ್ ಡಿ., ಪ್ರಾಂಶುಪಾಲರು. ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಕಾರ್ಕಳ ಇವರು ಒಬ್ಬ ಸರ್ಕಾರಿ ಅಧಿಕಾರಿಗೆ

ತರವಲ್ಲದ ರೀತಿಯಲ್ಲಿ ವರ್ತಿಸಿ, ಕರ್ತವ್ಯದಲ್ಲಿ ಸತ್ಯ, ನಿಷ್ಠೆ, ಪ್ರಾಮಾಣಿಕತೆ ತೋರಿಸುವುದರಲ್ಲಿ ವಿಫಲರಾಗಿ ಮೇಲಾಧಿಕಾರಿಗಳ ಆದೇಶವನ್ನು ಪಾಲಿಸದೇ ಕರ್ತವ್ಯಚ್ಯುತಿ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು. 1966 ರ ನಿಯಮ 3 (1)ರ ಉಪನಿಯಮ (i), (ii) ಮತ್ತು (iii) ನ್ನು ಉಲ್ಲಂಘಿಸಿದ ಆರೋಪಕ್ಕೆ ಒಳಗಾಗಿರುವ ಹಿನ್ನೆಲೆಯಲ್ಲಿ ಸಂಸ್ಥೆಯ ಆಡಳಿತಾತ್ಮಕ ಮತ್ತು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಸದರಿಯವರ ಮೇಲಿನ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಶ್ರೀ ವಾಸುದೇವ್ ಡಿ., ಪ್ರಾಂಶುಪಾಲರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಕಾರ್ಕಳ ಇವರನ್ನು ಕೆಸಿಎಸ್ [ಸಿಸಿಎ] ನಿಯಮಾವಳಿ 10 (1)ಡಿ ರನ್ವಯ ಸೇವೆಯಿಂದ ಅಮಾನತ್ತಿನಲ್ಲಿಡಲು ಶಿಫಾರಸ್ಸು ಮಾಡಿರುತ್ತಾರೆ.

ತಾಂತ್ರಿಕ ಶಿಕ್ಷಣ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 184 ಡಿಟಿಇ 2013**
**ಬೆಂಗಳೂರು, ದಿನಾಂಕ: 25ನೇ ಜುಲೈ 2013**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಶ್ರೀ ವಾಸುದೇವ್ ಡಿ., ಪ್ರಾಂಶುಪಾಲರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಕಾರ್ಕಳ ಇವರ ವಿರುದ್ಧ ನಡೆಸಲಾದ ಪೂರ್ವಭಾವಿ ವಿಚಾರಣೆಯಲ್ಲಿ ಇವರು ಕರ್ತವ್ಯ ನಿರ್ಲಕ್ಷ್ಯತೆ ಎಸಗಿರುವ ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಸದರಿಯವರು ಕರ್ತವ್ಯದಲ್ಲಿ ಸತ್ಯ, ನಿಷ್ಠೆ, ಪ್ರಾಮಾಣಿಕತೆಯನ್ನು ತೋರಿಸುವಲ್ಲಿ ವಿಫಲರಾಗಿ ಒಬ್ಬ ಜವಾಬ್ದಾರಿಯುತ ಸರ್ಕಾರಿ ಅಧಿಕಾರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿ ಕರ್ತವ್ಯ ಚ್ಯುತಿ ಎಸಗಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 3 (1)ರ ಉಪನಿಯಮ (i), (ii) ಮತ್ತು (iii) ನ್ನು ಉಲ್ಲಂಘಿಸಿರುವುದು ಕಂಡು ಬಂದಿರುವ ಹಿನ್ನಲೆಯಲ್ಲಿ ಇವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಇವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ಮತ್ತು ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ 10(1) (ಡಿ) ಅನ್ವಯ ಈ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ಅಮಾನತ್ತಿನಲ್ಲಿರಿಸಿ ಆದೇಶಿಸಿದೆ.

ಸದರಿಯವರು ಅಮಾನತ್ತಿನ ಅವಧಿಯಲ್ಲಿ ನಿಯಮಾನುಸಾರ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ. ಹಾಗೂ ಸದರಿಯವರು ಇಲಾಖೆಯ ಪೂರ್ವಾನುಮತಿ ಪಡೆಯದೇ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
25/7/13
(ಬಿ.ನಾಗಭೂಷಣ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಗೆ:

(1) ಮಹಾಲೇಖಪಾಲರು (ಎ&ಇ, ಲೆಕ್ಕಪರಿಶೋಧನೆ 1&2), ಕರ್ನಾಟಕ, ಬೆಂಗಳೂರು.
(2) ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
(3) ಜಿಲ್ಲಾ ಖಜಾನಾಧಿಕಾರಿ, ಕಾರ್ಕಳ, ಉಡುಪಿ ಜಿಲ್ಲೆ.
(4) ಶ್ರೀ ವಾಸುದೇವ್ ಡಿ., ಪ್ರಾಂಶುಪಾಲರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಕಾರ್ಕಳ, ಉಡುಪಿ ಜಿಲ್ಲೆ.
(5) ಶಾಖಾ ರಕ್ಷಾ ಕಡತ.
(6) ಹೆಚ್ಚುವರಿ ಪ್ರತಿ.

# ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 32 ಡಿಇಕ್ಯೂ (1) 2012 (ಏಕ ಕಡತ) / 1538

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 26-07-2013.

## ಹಿಂಬರಹ

ಮೇಲ್ಕಂಡ ಸರ್ಕಾರಕ ಆದೇಶವನ್ನು ಈ ಕೆಳಕಂಡವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ರವಾನಿಸಲಾಗಿದೆ.

**ಇವರಿಗೆ,**

ಶ್ರೀ ವಾಸುದೇವ ಡಿ, ಪ್ರಿನ್ಸಿಪಾಲರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಕಾರ್ಕಳ.

**ಪ್ರತಿ ಮಾಹಿತಿಗಾಗಿ:**

1. ಮಹಾಲೇಖಪಾಲರು (ಎ & ಎ ಲೆಕ್ಕಪರಿಶೋಧನೆ- 1 & 2), ಕರ್ನಾಟಕ, ಬೆಂಗಳೂರು.
2. ಜಿಲ್ಲಾ ಖಜಾನಾಧಿಕಾರಿಗಳು, ಕಾರ್ಕಳ, ಉಡುಪಿ ಜಿಲ್ಲೆ.
3. ಕಾರ್ಯದರ್ಶಿಗಳು, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು.
4. ಪ್ರಿನ್ಸಿಪಾಲರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಕಾರ್ಕಳ.
5. ನಿರ್ದೇಶಕರ ಆಪ್ತಶಾಖೆಗೆ. ಮಾಹಿತಿಗಾಗಿ.
6. ಇಎಸ್‌ಟಿ (2)ಎ, ಇಎಸ್‌ಟಿ (9), ಇಎಸ್‌ಟಿ (8)ಬಿ, ಇಎಸ್‌ಟಿ(7),ನಿರ್ದೇಶನಾಲಯ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ.

ಆಡಳಿತಾಧಿಕಾರಿ.

26/7